# ಬೃಹತ್ ಗ್ಲೋಬ್

ಸಾಮಾನ್ಯವಾಗಿ ಸರ್ಕಾರಿ ಶಾಲೆಗಳೆಂದರೆ ಮೂಗು ಮುರಿಯುವ ಜನರೇ ಹೆಚ್ಚು. ಆದರೆ ಖಾಸಗಿ ಶಾಲೆಗಳನ್ನು ಮೀರಿಸುವ ಅನೇಕ ಮಾದರಿ ಸರಕಾರಿ ಶಾಲೆಗಳಿವೆ. ಈ ನಿಟ್ಟಿನಲ್ಲಿ ರಾಯಚೂರಿನ ದೇವದುರ್ಗ ತಾಲೂಕಿನ ಗುಂಡೇರ ದೊಡ್ಡಿಯಲ್ಲಿನ ಸರಕಾರಿ ಕಿರಿಯ ಪ್ರಾಥಮಿಕ ಶಾಲೆ ಗಮನ ಸೆಳೆಯುತ್ತದೆ.

ಶಾಲೆಯ ಆವರಣದಲ್ಲಿರುವ ಬೃಹತ್ ಗ್ಲೋಬ್ ಅನ್ನು ಈ ಶಾಲೆಯ ಏಕೋಪಧ್ಯಾಯರಾದ ಸುರೇಶ್ ಕಟ್ಟೆಮನೆ ಮಸರಕಲ್ ಅವರು ಪ್ರತಿಭಾ ಕಾರಂಜಿಯಲ್ಲಿ ಮಕ್ಕಳಿಗೆ ಕ್ಲೇ ಮಾಡ್ಲಿಂಗ್ ಮಾಡಿಸುವಾಗ ಹೊಳೆದ ಆಲೋಚನೆಯಿಂದ ನಿರ್ಮಿಸಿದ್ದಾರೆ. ಗ್ಲೋಬ್‌ನಲ್ಲಿ ವಿವಿಧ ಖಂಡಗಳ, ದೇಶಗಳ, ಸಾಗರ, ಸರೋವರ ಇನ್ನಿತರ ಮಾಹಿತಿಯನ್ನು ಸ್ಪಷ್ಟವಾಗಿ ಬಿಡಿಸಿದ್ದು ಶಾಲೆಯ ಮಕ್ಕಳು ಆಟವಾಡುತ್ತಲೇ ಪ್ರಪಂಚ ಜ್ಞಾನವನ್ನು ಸುಲಭವಾಗಿ ಪಡೆದುಕೊಳ್ಳಲು ಅನುಕೂಲವಾಗಿದೆ. ಈ ಶಾಲೆಯು ಜಿಲ್ಲಾಧಿಕಾರಿಗಳ, ಶಿಕ್ಷಣಾಧಿಕಾರಿಗಳ ಮೆಚ್ಚುಗೆಗೆ ಪಾತ್ರವಾಗಿ ಅನೇಕ ಪ್ರಶಸ್ತಿಗಳನ್ನು ಪಡೆದುಕೊಂಡಿದೆ.

**-ಈರಣ್ಣ ಬೆಂಗಾಲಿ, ರಾಯಚೂರು**






# ಹಸಿರಿನ ಕಡೆ ನಮ್ಮ ನಡೆ

ಕೊಪ್ಪಳ ತಾಲೂಕಿನ ಮುನಿರಾಬಾದ್‌ನ ಓಂ ಸಸ್ಯಧಾಮದಲ್ಲಿ ಪ್ರವೇಶ ದ್ವಾರದಲ್ಲಿ ಈ ಸ್ತಬ್ಧ ಚಿತ್ರವು ಕಾಣಸಿಗುತ್ತದೆ. ಹಸಿರಿನ ಕಡೆಗೆ ಸಾಗುವ ಬಗ್ಗೆ ಹೊಂದಿರಬೇಕಾದ ದಿಟ್ಟ ನಿಲುವನ್ನು ಸಾರುತ್ತದೆ ಈ ದೃಶ್ಯ. ಸೈಕಲ್ಲೊಂದನ್ನು ವಿಶೇಷವಾಗಿ ಬಳಸಿಕೊಂಡಿರುವ ಸೃಜನಶೀಲತೆಗೆ ತಲೆದೂಗಬೇಕಾದ್ದೇ! ಸೈಕಲ್‌ನ ಮುಂದಿನ ಚಕ್ರದ ಎರಡೂ ಬದಿಗಳಲ್ಲಿ ಒಂದೊಂದು ಕುಂಡ ಹಾಗೂ ಮುಂಬದಿ ಚಕ್ರದ ಮೇಲೊಂದು ಸಸ್ಯವಿರುವ ಕುಂಡವಿದೆ. ಅಂತೆಯೇ ಕಂಬಿಯ ಕೆಳಗೆ ಸಾಲಾಗಿ ಮೂರು ಕುಂಡ, ಹಿಂಬದಿಯ ಸೀಟಲ್ಲಿ ಖಾಲಿ ಟ್ರೇ ಇರಿಸಲಾಗಿದೆ. ಇದರ ವಿನ್ಯಾಸ ಕಣ್ಸೆಳೆಯುವಂತದ್ದು.ಸದಾ ಹಸಿರು ಬೆಳೆಸಲು ಸಿದ್ಧ ಎಂಬುದನ್ನು ಇದು ಸಾರುತ್ತದೆ.

**-ಹನುಮಂತ ಭಟ್ ಬಿ.**
**ಬೆಂಗಳೂರು**

# ಪ್ರಾಚೀನ ಸಮಾಧಿ

ಕ್ರಿ.ಪೂ. 800 ರಿಂದ ಕ್ರಿ.ಶ. 200ರ ಮಧ್ಯದ ಅವಧಿಯ ಕಾಲದ ಸಮಾಧಿಯಿದು. ಲಿಖಿತ ಆಧಾರ ಇರುವ ಇತಿಹಾಸಕ್ಕಿಂತ ಹಿಂದಿನ ಕಾಲದ ನೂರೈವತ್ತಕ್ಕೂ ಹೆಚ್ಚು ಸಮಾಧಿಗಳನ್ನು ಕೊಪ್ಪ ತಾಲ್ಲೂಕು ಬೆಳವನ ಕೊಡಿಗೆ ಚಿಟ್ಟೆಮಕ್ಕಿ ಊರಿನಲ್ಲಿ ಕಾಣಬಹುದು.

**-ನ. ಸುರೇಶ ಕಲ್ಕೆರೆ, ಕೊಪ್ಪ**

